ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಹುಚ್ಚಮಾಸ್ತಿಗೌಡರು ಆ ಒಂದು ವಾಗ್ದಾನ ಮಾಡಿದ್ದರ ಪರಿಣಾಮದಿಂದ ನಾನು ಇಂದು ವಾಗ್ದಾನ ಮಾಡುತ್ತಿದ್ದೇನೆ. ಆದರೆ ಯಾವಾಗ ಜಾರಿಸುತ್ತೇನೆ ಎನ್ನುವಕ್ಕ ಬಗ್ಗೆ ಯೋಚನೆ ಮಾಡುತ್ತೇನೆ.

CULTIVABLE LAND AVAILABLE IN THE STATE

483. Sri B. BYRAPPAJI (Turuvekere).—

Will the Minister for Revenue be pleased to state :—

(a) the extent of cultivable land available for grant in each district of the state;

(b) the time limit prescribed for granting the land for cultivation by following the law prescribed ?

Sri N. HUTCHAMASTHY GOWDA (Minister for Revenue).—

(a) The statement showing the details is appended.

(b) 31st March 1974.

Statement showing the land available for disposal

		Acres Guntas
1.	Bangalore ..	8,000—00
2.	Belgaum ..	364—26
3.	Bellary ..	9,531—20
4.	Bidar ..	..
5.	Biijapur ..	..
6.	Coorg ..	17,784—23
7.	Chickmagalur ..	1,01,215—09
8.	Chitradurga ..	29,872—25
9.	Dharwar ..	263—07
10.	Gulbarga ..	6,248—30
11.	Hassan ..	1,00,506—04
12.	Kolar ..	8,510—16
13.	Mandya ..	39,010—14
14.	Mysore ..	27,855—33
15.	North Kanara ..	3,962—32
16.	Shimoga ..	59,667—33
17.	South Kanara ..	4,167—00
18.	Tumkur ..	17,992—17
19.	Raichur ..	8,152—39
	Total ..	4,45,106—08

ಶ್ರೀ ಬಿ. ಬೈರಪ್ಪಾಜಿ. ಸ್ವಾಮಿ ಈ ರಾಜ್ಯದಲ್ಲಿ 4,45,000 ಎಕರೆ ಸಾಗುವಳಿಗೆ ಕೊಡತಕ್ಕ ಜಮೀನು ಇದೆಯೆಂದು ಹೇಳಿದ್ದೀರಿ. ಆ ಜಮೀನಿನ ಹೊರತು ಅಕ್ರಮ ಸಾಗುವಳಿ ಮಾಡುವುದು ಸೇರಿ ಕೊಂಡಿದೆ ಅಲ್ಲವೇ ? ಆ ರೀತಿ ಅಕ್ರಮ ಸಾಗುವಳಿ ಮಾಡುವ ಜಮೀನು ಎಷ್ಟು ಲಕ್ಷ ಎಕರೆ ಇದೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಕ್ರಮ ಸಾಗುವಳಿ ಮಾಡತಕ್ಕ ಜಮೀನು ಇದರಲ್ಲಿ ಸೇರಿಲ್ಲ. ಅದರ ಬಗ್ಗೆ ಬೇರೆ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರೆ ಅದರ ಅಂಕಿ ಅಂಶಗಳನ್ನು ಒದಗಿಸಿಕೊಡುತ್ತೇನೆ. ಈಗ ಇರುವ ಹಾಗೆ ಜಿಲ್ಲಾವಾರು ಎಲ್ಲೆಲ್ಲಿ ಹೆಚ್ಚಿಗೆ ಭೂಮಿ ಇದೆಯೋ ಅಲ್ಲಿಗೆ ಒಬ್ಬ ಸ್ಪೆಷರ್ ಅಸಿಸ್ಟೆಂಟ್ ಕಮೀಷನರ್ ಅನ್ನು ಹಾಕಿ, ಅಲ್ಲಿರುವ ಹೆಚ್ಚು ಭೂಮಿಯನ್ನು ವಿತರಣೆ ಮಾಡುವ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಉಳಿದ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹೆಚ್ಚು ಭೂಮಿ ಇದೆ ಅಂಥ ಕಡೆಗೆ ಕೆಲಸ ಮುಗಿದಿರುವ ಕಡೆಯಿಂದ ಸ್ಪೆಷಲ್ ಆಫೀಸರ್ ವರ್ಗಾ ಮಾಡಿ ಅಲ್ಲಿಯೂ ಕೂಡ ಈ ಕೆಲಸವನ್ನು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರದ ಅಭಿಪ್ರಾಯ ಇದೆ. ಅದಷ್ಟು ಬೇಗ ಇದನ್ನು ಮುಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—31-3-197 ರೊಳಗೆ ಜಮೀನು ಹಂಚಿಕೆಯ ಕಾರ್ಯವನ್ನು ಮುಗಿಸುತ್ತೇವೆಂದು ಹೇಳಿದಿರಿ, ಆದರೆ ಲ್ಯಾಂಡ್ ಗ್ರಾಂಟ್ಸ್ ಕಮಿಟಿಗಳನ್ನು ಫಾರಂ ಮಾಡಿ ಒಂದು ತಿಂಗಳು ಆಗಿರಬಹುದು, ಅವರು ಸೇರಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ತಡವಾಗಬಹುದು, ಅಧಿಕಾರಿಗಳು ಅವರವರೇ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಈ ಕಾರ್ಯ 31-3-1974ರೊಳಗೆ ಮುಗಿಯುವುದಿಲ್ಲ ಎಂದು ನನಗಾದರೂ ಕೂಡ ಅನ್ನಿಸುತ್ತದೆ. ಈ ಬಗ್ಗೆ ಸರ್ಕಾರದವರು ಇದನ್ನು ಪುನರ್‌ಪರಿಶೀಲನೆ ಮಾಡಿ ಕಮಿಟಿಗಳ ಅವಧಿಯನ್ನು ಮುಂದುವರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನು ಹಂಚಿಕೆಯ ಕೆಲಸ ಬೇಗ ಆಗಬೇಕೋದರೆ, ಕೆಲಸ ಮುಗಿಯುವವರೆಗೆ ಸಮಿತಿಗಳು ಇರಬೇಕಾಗುತ್ತದೆ. ಆದ್ದರಿಂದ ಸಮಿತಿಗಳ ಅವಧಿಯನ್ನು ಹೆಚ್ಚು ಮಾಡಿ ಅದಷ್ಟು ಬೇಗ ಭೂಮಿಯನ್ನು ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ತಾವು 31-3-1974ರೊಳಗೆ ಈ ಕಾರ್ಯವನ್ನು ಪೂರೈಸುತ್ತೇವೆಂದು ಹೇಳಿದ್ದೀರಿ, ಆದರೆ ಎಷ್ಟೋ ಕಡೆಗಳಲ್ಲಿ ಲ್ಯಾಂಡ್ ಗ್ರಾಂಟ್ ಕಮಿಟಿಯವರು ಇದರ ಬಗ್ಗೆ ತೀರ್ಮಾನ ಮಾಡಿದ್ದರೂ ಕೂಡ ರಿಕಾರ್ಡುಗಳು ನಾಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಡೆಯೇ? ಬಂದಿದ್ದರೆ, ಅದನ್ನು ಕಂಡು ಹಿಡಿದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಸರ್ಕಾರದ ಗಮನಕ್ಕೆ ಬಂದಿಲ್ಲ, ಮಾನ್ಯ ಸದಸ್ಯರು ಅಂಥಾವ್ಯಾ ಯಾವುದಾದರೂ ಇದ್ದರೆ ನಮಗೆ ತಿಳಿಸಿದರೆ, ಕೂಡಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಸಮಿತಿಯವರು ತೀರ್ಮಾನ ಮಾಡಿದಂಥವರಿಗೆ ಅಧಿಕಾರಿಗಳು ಸಾಗುವಳಿ ಚೀಟಿಯನ್ನು ಕೊಡಬೇಕಾಗಿತ್ತು. ಆದರೆ ಇಲ್ಲಿ ನಿಧಾನವಾಗಿವೆ, ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಮುಂಚೆ ಏನಾದರೂ ಮರವಳಿ ಇದ್ದರೆ, ಮರೆನಾಡಿನಲ್ಲಿ ಕೆಲವು ಕಡೆಗಳಲ್ಲಿ ಇಂಥ ತೊಂದರೆ ಇವೆ. ಇದರ ಬಗ್ಗೆಯೂ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಅರಣ್ಯ ಖಾತೆಯವರ ಸಿಬ್ಬಂದಿ ಇಲ್ಲಿ ನಮಗೆ ಬೇಕಾಗುತ್ತದೆ. ಕೆಲವು ಕಡೆ ಸಿಬ್ಬಂದಿ ದೊರಕದೆ ವಿಧಾನವಾಗಿದೆ. ಈ ರೀತಿ ನಿಧಾನವಾಗಿರುವ ಕಡೆ, ಬೇಗ ಸಾಗುವಳಿ ಚೀಟಿಯನ್ನು ಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಕೂಡಲೆ ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಎಲ್ಲಿಯಾದರೂ ರಿಕಾರ್ಡು ನಾಪತ್ತೆಯಾಗಿರುವುದಾದರೆ, ಅದನ್ನು ಮಾನ್ಯ ಸದಸ್ಯರು ನಮಗೆ ತಿಳಿಸಿದರೆ, ಅದನ್ನು ಕೂಡಲೆ ವಿಚಾರಣೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳು ಯಾರು ಯಾರು ಈ ಕೆಲಸ ಮಾಡಿವ್ಯಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

Sri BAPU RAO PATIL.—I want to know whether the land is not available or the information is not available in Bidar District?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಗೊತ್ತಿರತಕ್ಕ ಮಾಹಿತಿಯ ಪ್ರಕಾರ ಇದು ಸ್ವಲ್ಪ ಅನುಮಾನಾಸ್ಪದವಾಗಿರುವುದು. ಅಂಕಿ ಅಂಶಗಳ ಸಂಗ್ರಹ ಇಲ್ಲದೆ ಇರುವುದರಿಂದ ಸ್ವಲ್ಪ ಅನುಮಾನ ಇದೆ. ಅದನ್ನು ತಿಳಿದು ಮಾನ್ಯ ಸಭೆಗೆ ತಿಳಿಸುತ್ತೇನೆ.

ಶ್ರೀ ಶರಣಪ್ಪ.—ಲ್ಯಾಂಡ್ ಗ್ರಾಂಟ್ ಕಮಿಟಿಯ ಅವಧಿಯನ್ನು ಹೆಚ್ಚು ಮಾಡುತ್ತೇವೆಂದು ಹೇಳಿದಿರಿ. 1968ನೇ ಇಸವಿಗಿಂತ ಮುಂಚೆ ಯಾರು ಯಾರು ಸರ್ಕಾರಿ ಭೂಮಿಯಲ್ಲಿ ಅನಧಿಕೃತರಾಗಿ ಸಾಗುವಳಿ ಮಾಡುತ್ತಿದ್ದರೋ ಅಂಥವರಿಗೆ ಆ ಭೂಮಿ ಕೊಡಬೇಕು ಎಂದು ಕಾಯಿದೆ ಮಾಡುತ್ತಿದ್ದೀರಿ. ಇಂಥ ಜನರಿಗೆ, ಲ್ಯಾಂಡ್ ಗ್ರಾಂಟ್ ಕಮಿಟಿಯವರು ಭೂಮಿಯನ್ನು ಹಂಚತಕ್ಕ ಪ್ರಸಂಗ ಬಂದಾಗ, ಆದೇ ಭೂಮಿಯನ್ನು ಕೊಡಬೇಕು ಎಂದು ತಿಳಿಸುತ್ತೀರಾ? ಮತ್ತು ನಮ್ಮ ವಾಜ್ಯದಲ್ಲಿ 4,45,000 ಎಕರೆ ಭೂಮಿ ಸಿಕ್ಕುತ್ತದೆಂದು ಹೇಳಿದಿರಿ, ಇದರಲ್ಲಿ ಕಲ್ಟೀವಬಲ್ ಲ್ಯಾಂಡ್ ಎಷ್ಟು? ನಾನ್ ಕಲ್ಟೀವಬಲ್ ಲಾಂಡ್ ಎಷ್ಟು ಇವೆ ಎಂದು ಹೇಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲನೆಯ ಪ್ರಶ್ನೆಗೆ ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. 4,45,000 ಎಕರೆ ಭೂಮಿಯಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿರತಕ್ಕದ್ದು ಇದ್ದರೆ, ಅದನ್ನೇ ಪ್ರತ್ಯೇಕವಾಗಿ ಅಧಿಕಾರಿಗಳು ಕೆಲವು ನಿಯಮಗಳ ಪ್ರಕಾರ ವಿಚಾರಣೆ ಮಾಡಿ ಒಂದು ತೀರ್ಮಾನ ಕೈಗೊಳ್ಳುತಕ್ಕ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಅದು ಸರ್ಕಾರಿ ಭೂಮಿಯಾಗಿದ್ದು, ಯಾರೂ ಆಕ್ರಮಿಸದೇ ಇರತಕ್ಕ ಭೂಮಿ, ಕಮಿಟಿಗಳ ಮುಂದೆ ಬರುತ್ತದೆ. ಇದನ್ನು ಅಧಿಕಾರಿಗಳೇ ತೀರ್ಮಾನ ಮಾಡಬೇಕಾಗುತ್ತದೆ. ಈ ರೀತಿ ಇರುವುದರಿಂದ ಈ ಒಂದು ಕೆಲಸವನ್ನು ಅಧಿಕಾರಿಗಳಿಗೆ ವಹಿಸಿದೆ. ಸಮಿತಿಗಳಿಗೆ ವಹಿಸಿರತಕ್ಕದ್ದು, ಸರ್ಕಾರಿ ಭೂಮಿ, ಬಂಜರು ಭೂಮಿ, ಮತ್ತು ಯಾರೂ ಆಕ್ರಮಿಸದೆ ಇರತಕ್ಕ ಭೂಮಿ, ಇದನ್ನು ಮಂಜೂರು ಮಾಡುವುದಕ್ಕೆ ಸಮಿತಿಗಳಿಗೆ ವಹಿಸಿದೆ. ನನಗೆ ತಿಳಿದಮಟ್ಟಿಗೆ ವ್ಯವಸಾಯಕ್ಕೆ ಅರ್ಹವಾದಂಥ ಭೂಮಿ ಸುಮಾರು 8-10 ಲಕ್ಷ ಎಕರೆಗಿಂತ ಮೇಲ್ಪಟ್ಟು ಇದೆಯೆಂದು ಅಂಕಿಅಂಶಗಳಿಂದ ಗೊತ್ತಿದೆ. ಇದು ಸಾಗುವಳಿಗೆ ಅರ್ಹವಾಗಿರತಕ್ಕ ಭೂಮಿ ಮಾತ್ರ.

ಶ್ರೀ ಕೆ. ಪುಟ್ಟರಂಗನಾಥ್.—31-3-1974ರೊಳಗೆ ಈ ಕೆಲಸವನ್ನು ಮುಗಿಸುತ್ತೇವೆಂದು ಹೇಳಿದ್ದೀರಿ, ಈಗಾಗಲೇ 5-6 ವರ್ಷಗಳ ಹಿಂದೆ ಜಮೀನು ಮಂಜೂರು ಮಾಡಿರತಕ್ಕವರಿಗೆ ಸಾಗುವಳಿ ಚೀಟಿಯನ್ನು ಕೊಡದೆ ಇರತಕ್ಕದ್ದು ಮತ್ತು ಉಳಿದಿರತಕ್ಕ ಜಮೀನಿನ ಬಗ್ಗೆ ವಿತರಣೆ ಮಾಡುವುದಕ್ಕೆ ರೆಗ್ಯುಲರ್ ತಹಸೀಲ್ದಾರ್‌ಅವರಿಂದ ಆಗದೆ ಇರುವುದರಿಂದ ಅಲ್ಲಿಗೆ ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್ ಅವರನ್ನು ನೇಮಕ ಮಾಡಿ ಆದಷ್ಟು ಬೇಗ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದನ್ನೂ ಕೂಡ ನಾನು ಸ್ಪಷ್ಟವಾಗಿ ಹೇಳಿದೆ. ಎಲ್ಲೆಲ್ಲಿ ಜಾಸ್ತಿ ಭೂಮಿ ಇದೆ, ಅಲ್ಲಿಗೆ ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್ ಅವರನ್ನು ಹಾಕಿದ್ದೇವೆ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆ, ಮೈಸೂರು, ಕೋಲಾರ, ಮತ್ತು ಚಿಕ್ಕಮಗಳೂರು, ಈ ಆರು ಕಡೆ, ತುಮಕೂರು ಸೇರಿ, 7 ಕಡೆ ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್ ಅವರನ್ನು ನೇಮಕ ಮಾಡಿ ವ್ಯವಸ್ಥೆ ಮಾಡಿದ್ದೇವೆ. ಈಗಾಗಲೇ ತುಮಕೂರನ್ನು ಬಿಟ್ಟು ಉಳಿದ ಆರು ಜಿಲ್ಲೆಗಳಲ್ಲಿ ಅಸಿಸ್ಟೆಂಟ್ ಕಮೀಷನರ್ ಇದ್ದಾರೆ. ಮತ್ತು ಎಲ್ಲ ಜಮೀನು ವಿತರಣೆಯ ಕೆಲಸ ಕಡಿಮೆಯಾಗಿದೆ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಕೋಲಾರ ಗಳಲ್ಲಿ ಕೆಲಸ ತೀರ ಕಡಿಮೆ ಇದೆ, ಅಲ್ಲಿ ಖಾಯಂ ಆಗಿ ಇರತಕ್ಕ ಅಧಿಕಾರವರ್ಗದವರೇ ಮಾಡಬೇಕೆಂದು ಹೇಳಿ, ಹೆಚ್ಚು ಹೆಚ್ಚು ಭೂಮಿ ಇರತಕ್ಕ ಚಿಕ್ಕಮಗಳೂರು, ಹಾಸನ, ಮಂಡ್ಯ ಈ ಜಿಲ್ಲೆಗಳಿಗೆ ಅಸಿಸ್ಟೆಂಟ್ ಕಮೀಷನರ್ಸ್ ಅನ್ನು ಕೆಲಸ ಮುಗಿದಿರುವ ಕಡೆಯಿಂದ ವರ್ಗಮಾಡಿ ಅಲ್ಲಿಯೂ ಕೆಲಸ ಬೇಗ ಆಗುವಂತೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜೆ. ಎಲ್. ಕಟಾಡಿ.—ಪ್ರತಿಯೊಂದು ಜಿಲ್ಲೆಗೂ ಈ ಗ್ರ್ಯಾಂಟ್ ಕಮಿಟಿಯನ್ನು ಏನು ನೇಮಿಸಿದ್ದೀರಿ, ಅವರು ಇಲ್ಲಿಯ ಸಮಿತಿಯನ್ನು ಕರೆಯದೆ ಯಾವ ತರಹದ ಭೂಮಿಯನ್ನು ಹಂಚಿಲ್ಲ. ಆ ಕಮಿಟಿ ಡಿಸಾಲ್ವ್ ಆಗಿದೆ, ತಾವು ಹೇಳುವ ಪ್ರಕಾರ ಕಮಿಟಿಯನ್ನು ಮುಂದುವರಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಮಿಟಿಗಳ ಅವಧಿ ಮುಗಿದು ಪುನರ್‌ರಚನೆ ಮಾಡುವಾಗ ನಿಧಾನವಾಯಿತು. ಈಗ ಅದನ್ನು ಪುನರ್‌ರಚನೆ ಮಾಡಿ ಗೆಜೆಟಿನಲ್ಲಿ ನೋಟಿಫಿಕೇಶನ್ ಸಹ ಬಂದಿದೆ. ಇನ್ನು ಅಧಿಕಾರಿಗಳು ಬೇಗನೆ ಸಭೆ ಕರೆಯುವುದಕ್ಕೆ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ತಮ್ಮ ಉತ್ತರದಲ್ಲಿ 31-3-1974 ಕೊನೆಯ ದಿನ ಎಂದು ಹೇಳಿದ್ದೀರಿ. 4,45,106 ಎಕರೆ 08 ಗುಂಟೆ ಜಮೀನು—ಇದು ಲ್ಯಾಂಡ್ ರಿಫಾರ್ಮ್ಸ್ ಬಂದ ಮೇಲೆ ಜಾರಿಗೆ ಕೊಡತಕ್ಕ ಜಮೀನೇ ಅಥವಾ ಫಾರೆಸ್ಟ್ ಲ್ಯಾಂಡೇ ಅಥವಾ ಅಮೃತ ಮಹಲ್ ಜಮೀನೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಲ್ಯಾಂಡ್ ರಿಫಾರ್ಮ್ಸ್ ಬಂದ ಮೇಲೆ ನಿಗತಕ್ಕ ಜಮೀನು ಅಲ್ಲ, ಫಾರೆಸ್ಟ್ ಜಮೀನು ಅಲ್ಲ ಮತ್ತು ಅಮೃತಮಹಲ್ ಜಮೀನು ಸಹ ಅಲ್ಲ. ಈಗಾಗಲೇ ತಾವು ಆಗವೆ ಯಾರೂ ಆಕ್ರಮಿಸಿಕೊಳ್ಳದೆ ಇರತಕ್ಕಂತಹ ಹೆಚ್ಚುವರಿ ಸರ್ಕಾರೀ ಭೂಮಿ.

ಶ್ರೀ ಕೆ. ಎಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಸಲ ರೋಡುಗಳನ್ನು ಮಾಡಬೇಕಾದರೆ, ಬಾವಿಗಳನ್ನು ಮಾಡಬೇಕಾದರೆ ಮತ್ತು ಶಾಲಾ ಕಟ್ಟಡಗಳನ್ನು ಮಾಡಬೇಕಾದರೆ ಕೆಲವರು ವಾಲಂಟರಿಯಾಗಿ ಯಾವ ಕಾಂಪೆನ್‌ಸೇಷನ್ ತೆಗೆದುಕೊಳ್ಳದೆ ಜಮೀನನ್ನು ಕೊಟ್ಟಿರುತ್ತಾರೆ. ಅಂಥವರಿಗೆ ತಾವು ದರಖಾಸ್ತು ಜಮೀನು ಮಂಜೂರು ಮಾಡುವಾಗ ಪ್ರಯಾರಿಟಿ ಕೊಡುವುದಕ್ಕೆ ಆದೇಶವನ್ನು ಕಳಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕಂತಹ ನಿಯಮಗಳ ಪ್ರಕಾರ ಜಮೀನು ಕಳಕೊಂಡವರಿಗೆ ಆದ್ಯತೆ ಇಲ್ಲ. ಅದನ್ನು ಕೊಡಬೇಕಾದರೆ ಎಕ್ಸ್ ಪ್ರೊಪ್ರೈಟರಿ ರೈಟ್ಸ್ ಪ್ರಕಾರ ಇಂತಿಂಥವರಿಗೆ ಇಂತಿಂಥ ಸರ್ವೆ ನಂಬರ್ ರಿಸರ್ವ್ ಮಾಡಬೇಕೆಂದು ಸರ್ಕಾರೀ ಹುಕುಂ ಇದ್ದರೆ ಮಾತ್ರ ಸಾಧ್ಯ. ಮಾನ್ಯ ಸದಸ್ಯರು ಹೇಳುವ ವಿಚಾರದ ಬಗ್ಗೆ ಯಾವ ರೀತಿ ಮಾಡಬೇಕೆಂಬುದನ್ನು ಅಲೋಚನೆ ಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ 4,45,106 ಎಕರೆ ಜಮೀನಿನಲ್ಲಿ ಯಾವ್ಯಾವ ಭಾಗಕ್ಕೆ ಎಷ್ಟೆಷ್ಟು ಕೊಡಬೇಕಂದು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಇದೆ. ಈ ರೀತಿ ಇರುವ ಜಮೀನಿನ ಪಟ್ಟಿಯನ್ನು ಗ್ರಾಮ ಪಾವಡಿಯಲ್ಲಿ ಹಾಕಿ, ರಾಜಕೀಯ ನಿರಾಶ್ರಿತರಿಗೆ ಇಷ್ಟು, ಭೂರಹಿತ ಜನರಿಗೆ ಇಷ್ಟು ಮತ್ತು ಪರಿಶಿಷ್ಟ ವರ್ಗದವರಿಗೆ ಇಷ್ಟು ಎಂದು ಗೊತ್ತು ಮಾಡಿ ತಿಳಿಸಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿಯಮಗಳಿಗನುಸಾರವಾಗಿ ಮಾಡುವಾಗ ಪ್ರಯಾರಿಟಿಯನ್ನು ಗೊತ್ತುಮಾಡಿದೆ. ನಮ್ಮ ಅಧಿಕಾರಿಗಳು ಯಾವ್ಯಾವ ಊರಿನಲ್ಲಿ ಜಮೀನು ಇದೆ, ಅದನ್ನೆಲ್ಲಾ ಸರ್ವೆ ಮಾಡಿ, ಆ ಸ್ಥಳಕ್ಕೆ ಹೋಗಿ ಎಷ್ಟೆಷ್ಟು ಅರ್ಜಿಗಳು ಬಂದಿರುತ್ತವೆ, ಅವುಗಳಲ್ಲಿ ಕ್ರಮಬದ್ಧವಾಗಿರುವುದು ಯಾವುದು ಎಂದು ಪರಿಶೀಲನೆ ಮಾಡಿ, ಅಕ್ರಮವಾಗಿರುವಂತಹ ಅರ್ಜಿಗಳನ್ನು ವಜಾ ಮಾಡಿ, ಕ್ರಮವಾಗಿರುವುದನ್ನು ಮಾತ್ರ ಕಮಿಟಿ ಮುಂದೆ ಇಡುತ್ತಾರೆ. ಅದಕ್ಕೆ ಮುಂಚಿತವಾಗಿ ಇಂತಿಂಥ ಸರ್ವೆ ನಂಬರಿನಲ್ಲಿ ಇಷ್ಟು ಭೂಮಿ ಇದೆ ಎಂಬ ಅವೈಲೇಬಲ್ ಲಿಸ್ಟನ್ನು ಪ್ರತೀ ತಾಲ್ಲೂಕು ಆಫೀಸಿನಲ್ಲಿಯೂ ಹಾಕತಕ್ಕ ಪದ್ಧತಿ ಇದೆ. ಅದನ್ನು ಎಲ್ಲಾ ಕಡೆಗಳಲ್ಲಿಯೂ ಮಾಡಿದ್ದಾರೆ. ಯಾರು ಹೋದರೂ ಆ ಪಟ್ಟಿಯನ್ನು ತೋರಿಸಿಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ ಗ್ರಾಮ ಪಾವಡಿಗಳಲ್ಲಿ ಹಾಕುವುದೆಂದರೆ ಸ್ವಲ್ಪ ಕಷ್ಟ. ಅನೇಕ ಕಡೆಗಳಲ್ಲಿ ಅದಕ್ಕೆ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಕೆಲವು ಕಡೆ ತೊಂದರೆಯಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ನಮಗೆ ಕೊಟ್ಟಿರತಕ್ಕಂತಹ ಪಟ್ಟಿ ಪ್ರಕಾರ 4 ಲಕ್ಷ 45 ಸಾವಿರ ಎಕರೆ ಜಮೀನು ಇದೆ ಎಂದು ಹೇಳುತ್ತೀರಿ. ಈಗಾಗಲೇ ಭೂಸುಧಾರಣೆ ಜಾರಿಗೆ ಬಂದರೆ ಅದರಲ್ಲಿರುವ ಹೆಚ್ಚುವರಿ ಜಮೀನನ್ನು ಮತ್ತು ಇದನ್ನು ಸೇರಿಸಿ ಹಂಚಿದರೆ ಚೆನ್ನಾಗಿರುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭೂಸುಧಾರಣೆಯ ಕಾನೂನಿನಲ್ಲಿ ಬರುವ ಹೆಚ್ಚುವರಿ ಜಮೀನು ಬೇರೆ ; ಇದು ಬೇರೆ.

ಶ್ರೀ ಕೆ. ಪ್ರಭಾಕರ್.—ತಾವು ಕೊಟ್ಟ ಈ ಪಟ್ಟಿಯಲ್ಲಿ ಗೋಮಾಳ ಜಮೀನು ಸೇರಿಲ್ಲ ಅಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಅವೈಲೇಬಲ್ ಲಿಸ್ಟಿನಲ್ಲಿರುವುದು ಯಾವ ತಕರಾರು ಇಲ್ಲದೆ, ಗೋಮಾಳ ಜಮೀನಿಗಾಗಿ ಕೊಟ್ಟದ್ದನ್ನು ಬಿಟ್ಟು ಇರುವಂತಹ ಪಟ್ಟಿ ಇದು ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಬೈರವಾಜಿ.—ಜಮೀನನ್ನು ಹಂಚತಕ್ಕ ವ್ಯವಸ್ಥೆಯಲ್ಲಿ ತಡವಾದಷ್ಟು ಅಕ್ರಮ ಸಾಗುವಳಿ ಜಾಸ್ತಿಯಾಗುತ್ತದೆ. ಆದ್ದರಿಂದ ಅಕ್ರಮ ಸಾಗುವಳಿಗೆ ಅವಕಾಶ ಕೊಡುವ ನೀತಿ ಸರಿಯಲ್ಲವೆಂದು ತಿಳಿದುಕೊಂಡು 5 ಸಾವಿರ ಎಕರೆಗೆ ಮೇಲ್ಪಟ್ಟು ಈ ರೀತಿ ಎಲ್ಲ ಜಮೀನು ಇರುತ್ತವೆ ಆ ಜಿಲ್ಲೆಗಳಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಷನರನ್ನು ಪೋಸ್ಟ್ ಮಾಡಿ, ಈ ಕಾರ್ಯ ತ್ವರಿತವಾಗಿ ಮುಗಿಯುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿಧಾನವಾದಷ್ಟು ಅಕ್ರಮ ಸಾಗುವಳಿ ಜಾಸ್ತಿಯಾಗುತ್ತದೆ ಎನ್ನುವುದು ನಿಜ. ಅದಕ್ಕೆ ಪ್ರೋತ್ಸಾಹ ಕೊಡುವುದು ಸರ್ಕಾರವಲ್ಲ, ಜಮೀನು ಇಲ್ಲದಿರುವವರು. ಇದನ್ನು ತಪ್ಪಿಸುವುದಕ್ಕೆ ಈಗಾಗಲೇ ಪ್ರತೀ ಜಿಲ್ಲೆಗಳಲ್ಲಿ ಅಕ್ರಮ ಸ್ವಾಧೀನದಲ್ಲಿ ಎಷ್ಟು ಇದೆ ಎಂಬುದನ್ನು ಕಂಡುಹಿಡಿಯಬೇಕೆಂದು ಹೇಳಿದ್ದೇವೆ. ಇನ್ನು ಮುಂದೆ ಅಕ್ರಮ ಪ್ರವೇಶ ಮಾಡಿದರೆ ಕೂಡಲೇ ಅವುಗಳನ್ನು ಬಿಡುಗಡೆ ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತಹ ಸಲಹೆಯ ಪ್ರಕಾರ ಅಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.